ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯಕಾಲ    ದಿನಾಂಕ : DATE : 31/5/2020

# ಮೋದಿ 2.0 ಸರ್ಕಾರ ಐತಿಹಾಸಿಕ ಸಾಧನೆಗಳ ಪರ್ವ

ಉ.ಕಾ 31/5/20

**ನವದೆಹಲಿ:** 'ಪ್ರಧಾನಿ ನರೇಂದ್ರ ಮೋದಿ 2.0 ಸರ್ಕಾರದ 1ನೇ ವರ್ಷ ಐತಿಹಾಸಿಕ ಸಾಧನೆಗಳಿಂದ ತುಂಬಿದೆ. ಪ್ರಧಾನಿ ಅವರು ಕಠಿಣ ಮತ್ತು ದೊಡ್ಡ ನಿರ್ಧಾರಗಳಿಂದ ದೇಶದ ರೂಪು ರೇಷೆಯನ್ನೇ ಬದಲಿಸಿದ್ದಾರೆ' ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

'ಮೊದಲ ವರ್ಷವನ್ನು ಯಶಸ್ವಿಯಾಗಿ ಪೂರೈಸಿದ ಪ್ರಧಾನಿ ಮೋದಿ ಅವರನ್ನು ಅಭಿನಂದಿಸುತ್ತೇನೆ. ಹಲವು ಐತಿಹಾಸಿಕ ತಪ್ಪುಗಳನ್ನು ಈ ಒಂದು ವರ್ಷದಲ್ಲಿ ಸರಿಪಡಿಸಲಾಗಿದೆ. ಸ್ವಾವಲಂಬಿ ಭಾರತಕ್ಕೆ ಸರ್ಕಾರ ಭದ್ರ ಅಡಿಪಾಯ ಹಾಕಿದೆ' ಎಂದು ಹೆಮ್ಮೆ ವ್ಯಕ್ತಪಡಿಸಿದ್ದಾರೆ.

**ಅಭಿವೃದ್ಧಿ ಸೇತುವೆ ಕಟ್ಟಿದ ಮೋದಿ:** ಕಳೆದ 60 ವರ್ಷಗಳಲ್ಲಿ ಆಗದ ದೇಶದ ಅಭಿವೃದ್ಧಿಯನ್ನು ಪ್ರಧಾನಿ ಮೋದಿ ಕೇವಲ 6 ವರ್ಷಗಳಲ್ಲಿ ಪ್ರಗತಿಯ ಸೇತುವೆ ಕಟ್ಟುವ ಮೂಲಕ ಸಾಧಿಸಿ ತೋರಿಸಿದ್ದಾರೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಬಣ್ಣಿಸಿದ್ದಾರೆ. 'ಅತ್ಯಂತ ಕಠಿಣ ಮತ್ತು ದಿಟ್ಟ ನಿರ್ಧಾರಗಳ ಮೂಲಕ ಮೋದಿ ಅವುಗಳಿಗೆ ಉತ್ತರಿಸಿದರು. ಅದರಲ್ಲಿ ಕಾಶ್ಮೀರ ವಿಚಾರವೂ ಒಂದು. ಕಾಶ್ಮೀರದಲ್ಲಿ 370ನೇ ವಿಧಿಯ ರದ್ದತಿಯಿಂದ ಒಂದು ರಾಷ್ಟ್ರ ಒಂದು ಧ್ವಜ ಪರಿಕಲ್ಪನೆ ಜಾರಿಗೊಳಿಸಲು ಸಾಧ್ಯವಾಯಿತು' ಎಂದಿದ್ದಾರೆ.

## ಪೌರತ್ವ ತಿದ್ದುಪಡಿ ಕಾಯ್ದೆ ಸಾಧನೆ ಪಟ್ಟಿಯಲ್ಲಿಲ್ಲ!

ಕೇಂದ್ರ ಗೃಹ ಸಚಿವಾಲಯ ಪಟ್ಟಿಮಾಡಿರುವ ಸರ್ಕಾರದ ಸಾಧನೆಗಳಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ ಮಾಡಿರುವ ವಿಚಾರದ ಪ್ರಸ್ತಾಪವೇ ಇಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿ 370ನೇ ವಿಧಿಯನ್ನು ರದ್ದು ಮಾಡಿ ಕೇಂದ್ರಾಡಳಿತ ಪ್ರದೇಶ ಸ್ಥಾನ ನೀಡಿರುವುದು, 5,300 ಕಾಶ್ಮೀರಿ ಕುಟುಂಬಗಳ ಸ್ಥಳಾಂತರ, ಕರ್ತಾರ್‌ಪುರ ಕಾರಿಡಾರ್, ಅಮರನಾಥ ಯಾತ್ರಿಕರಿಗೆ ಸುರಕ್ಷಿತ ದರ್ಶನ, ಕೊರೊನಾ ವೈರಸ್ ಬಿಕ್ಕಟ್ಟನ್ನು ನಿಯಂತ್ರಿಸಿರುವುದು, ಅಂಫಾನ್ ಚಂಡಮಾರುತ ಸಂತ್ರಸ್ತರಿಗೆ ಪರಿಹಾರ... ಇತ್ಯಾದಿ ಸಾಧನೆಗಳು ಮಾತ್ರವೇ ಪಟ್ಟಿಯಲ್ಲಿವೆ. ಪೌರತ್ವ ತಿದ್ದುಪಡಿ ಕಾಯ್ದೆ ಜಾರಿಯಾದಾಗ ದೇಶದ ಹಲವೆಡೆ ಕಾಯ್ದೆ ವಿರೋಧಿಸಿ ಪ್ರತಿಭಟನೆ, ಹಿಂಸಾಚಾರ ನಡೆದಿದ್ದರಿಂದ ಅದನ್ನು ಸಾಧನೆಗಳ ಪಟ್ಟಿಯಿಂದ ಕೈಬಿಡಲಾಗಿದೆ ಎನ್ನಲಾಗಿದೆ.